

ಅರುಣ ಪಿ. ಭಟ್ಟ

## ವಾರದ ಭವಿಷ್ಯ: 02.03.2023ರಿಂದ 08.03.2023ರವರೆಗೆ




ಸಾಹಿತ್ಯ ಕ್ಷೇತ್ರದಲ್ಲಿ ಇರುವವರಿಗೆ ಉತ್ತಮ ಪ್ರಗತಿ. ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾದ ಪ್ರಗತಿ ಇದೆ. ವೈಯಕ್ತಿಕ ಸಂಬಂಧಗಳು ಸುಮಧುರವಾಗಿ ಇರುತ್ತವೆ. ಇದರಿಂದ ನಿಮ್ಮ ಸಂತೋಷ ಹೆಚ್ಚಾಗಲಿದೆ. ವಾರದ ಮಧ್ಯ ಭಾಗದಲ್ಲಿ ಈ ಹಿಂದೆ ನೀವು ತೆಗೆದುಕೊಂಡ ನಕಾರಾತ್ಮಕ ನಿರ್ಧಾರಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತೀರಿ. ಶುಭದಿನ: 08. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಕೌಟುಂಬಿಕ ವಿಚಾರಗಳಲ್ಲಿ ಉತ್ತಮವಾದ ಪ್ರಗತಿಯನ್ನು ಕಾಣಲಿದ್ದೀರಿ. ಮಾರಾಟ ವಿಭಾಗದಲ್ಲಿ ಕೆಲಸ ನಿರ್ವಹಿಸುವವರು ಗುರಿ ಮುಟ್ಟುವಲ್ಲಿ ಸಫಲರಾಗುತ್ತೀರಿ. ಆರೋಗ್ಯ ಉತ್ತಮವಾಗಿ ಇರುತ್ತದೆ. ಬಂಡವಾಳ ಹೂಡಿಕೆಗೆ ಹಲವು ಅವಕಾಶಗಳನ್ನು ಪರಿಶೀಲಿಸಿ, ಅಂತಿಮವಾಗಿ ಅತ್ಯುತ್ತಮವಾದದ್ದನ್ನು ಆರಿಸಿಕೊಳ್ಳುವಲ್ಲಿ ನೀವು ಯಶಸ್ಸು ಪಡೆಯುತ್ತೀರಿ. ಶುಭದಿನ: 02. ಶ್ರೀ ಲಕ್ಷ್ಮೀ ನರಸಿಂಹಪಂಚರತ್ನ ಸ್ತೋತ್ರ ಪಠಿಸಿರಿ.




ನೀವು ನಂಬಿದ ವಿಚಾರಗಳನ್ನು ಪ್ರಸ್ತುತ ಪಡಿಸುವುದಕ್ಕೆ ಬಹಳ ಶ್ರಮ ಪಡುತ್ತೀರಿ. ಸ್ನೇಹಿತರು ಸಾಲ ಕೇಳಿದರು ಎಂದು ತಕ್ಷಣ ನೀಡಿದರೆ ವಾಪಸ್ ಬರುವುದು ಕಷ್ಟ. ಕಾನೂನು ವಿಚಾರಗಳು ನಿಮ್ಮ ವಿರುದ್ಧ ಸಾಗುತ್ತವೆ. ಬೇರೊಬ್ಬರು ನೀಡಿದ ಕಾಗದ ಪತ್ರಗಳನ್ನು ನೀವು ಕಳೆದುಕೊಳ್ಳುವ ಅಪಾಯವಿದೆ. ವಾಹನ ಚಾಲನೆ ಮಾಡುವಾಗ ಎಚ್ಚರ. ಶುಭದಿನ: 07. ಗಣೇಶಪಂಚರತ್ನ ಸ್ತೋತ್ರ ಪಠಣ ಮಾಡಿರಿ.




ಒಂದೇ ಸಲಕ್ಕೆ ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಲಿ. ಸರ್ಕಾರಿ ನೌಕರರಿಗೆ ವರ್ಗಾವಣೆ ಆದರೂ ಆಗಬಹುದು. ವೈಯಕ್ತಿಕ ಸಂಬಂಧದಲ್ಲಿ ಬಹಳ ಹುಷಾರಾಗಿರಬೇಕು. ಕೋರ್ಟ್ ಪ್ರಕರಣ ನಡೆಯುತ್ತಿದ್ದರೆ ಆ ಕಡೆ ಹೆಚ್ಚಿನ ಗಮನ ನೀಡಬೇಕು. ಶುಭದಿನ: 08. ಕಾಲಭೈರವಾಷ್ಟಕ ಸ್ತೋತ್ರ ಪಠಿಸಿರಿ.




ವಾರದ ಶುರುವಿನಿಂದಲೇ ಅಂದುಕೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಕೆಲಸ– ಕಾರ್ಯಗಳಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ತೃಪ್ತಿ ಮೂಡುತ್ತದೆ. ಉದ್ಯೋಗ ಜೀವನದಲ್ಲಿ ಹೆಮ್ಮೆ ಪಡುವಂಥ ಸನ್ನಿವೇಶ ನಿರ್ಮಾಣವಾಗುತ್ತದೆ. ಆರೋಗ್ಯ ಉತ್ತಮವಾಗಿರುತ್ತದೆ. ವೇಗವಾಗಿ ಕೆಲಸಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಶುಭದಿನ: 03. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಪುಣ್ಯಕ್ಷೇತ್ರ ದರ್ಶನಕ್ಕೆ ತೆರಳುವ ಸಾಧ್ಯತೆ. ಅಗತ್ಯಕ್ಕೆ ತಕ್ಕಂತೆ ಈ ವಾರ ಕೆಲ ನಿಯಮಗಳನ್ನು ಅಳವಡಿಸಿಕೊಳ್ಳಲಿದ್ದೀರಿ. ಇದರಿಂದ ಮಾರುಕಟ್ಟೆಯ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ. ಕೆಲವು ಕೆಲಸಗಳನ್ನು ಪೂರ್ಣಗೊಳಿಸಲು ಸೋದರ ಸೋದರಿ ಸಹಾಯ ಸಿಗುತ್ತದೆ. ಮನೆಯಲ್ಲಿ ಸಂತಸದ ವಾತಾವರಣ ಇರುತ್ತದೆ. ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಶುಭದಿನ: 02. ಆದಿತ್ಯ ಹೃದಯ ಪಠಿಸಿರಿ.




ಕುಟುಂಬ ಸದಸ್ಯರ ಜತೆಗೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ ಇದೆ. ಹಿಂದೆಂದಿಗಿಂತಲೂ ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಕಾನೂನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೊಡಗಿಕೊಳ್ಳಬೇಕಾದ ಅಗತ್ಯ ಕಂಡುಬರುತ್ತದೆ. ನೀವು ಪ್ರತಿನಿಧಿಸುವ ಸಂಸ್ಥೆಯ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲವು ಸೂತ್ರಗಳನ್ನು ರೂಪಿಸಲಿದ್ದೀರಿ. ಶುಭದಿನ: 02. ಚಂಡಿ ಪಾರಾಯಣ ಮಾಡಿರಿ.




ವಾರದ ಮೊದಲ ಭಾಗದಲ್ಲಿ ಅತಿ ಮುಖ್ಯವಾದ ಕೆಲಸಗಳನ್ನು ಮುಗಿಸಿಕೊಳ್ಳಿ. ಉದ್ಯಮಿಗಳು ಗುಣಮಟ್ಟದ ನಿರ್ಧಾರದಿಂದ ಜನ ಮೆಚ್ಚುಗೆಗೆ ಪಾತ್ರರಾಗುತ್ತೀರಿ. ನಿಮ್ಮ ಸಾಮರ್ಥ್ಯ ಕಂಡು ಇತರರು ಬೆರಗಾಗುತ್ತಾರೆ. ಸಾರ್ವಜನಿಕ ಮನ್ನಣೆ ದೊರೆಯುವ ಅವಕಾಶಗಳು ನಿಚ್ಚಳವಾಗಿವೆ. ಹೊಸ ಕೆಲಸಕ್ಕೆ ಪ್ರಯತ್ನ ಮಾಡುತ್ತಿರುವವರು ಶ್ರಮವನ್ನು ಹೆಚ್ಚಿಸಬೇಕು. ಶುಭದಿನ: 04. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಇರುವ ನಿಮ್ಮ ಹಲವು ಕೆಲಸಗಳಿಗೆ ಈ ವಾರ ಪರಿಹಾರ ಸಿಗಲಿದೆ. ಉದ್ಯೋಗ ಹಾಗೂ ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ಮುಖ್ಯವಾದ ಚರ್ಚೆ ಕೂಡ ನಡೆಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಹೆಚ್ಚು ಸಮಾಧಾನ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ಶುಭದಿನ: 02. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ವಾರದ ಆರಂಭದಲ್ಲಿ ವೃತ್ತಿಪರರಿಗೆ ಮುಖ್ಯವಾದ ಅವಕಾಶಗಳು ದೊರೆಯುತ್ತವೆ. ದೊಡ್ಡ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಆಸೆ ಪೂರೈಸುತ್ತದೆ. ಜ್ವರ ಮತ್ತಿತರ ಆರೋಗ್ಯ ಬಾಧೆಗಳು ಕಾಡಬಹುದು. ಸಂಗಾತಿ ಜತೆಗೆ ಸಂತಸದ ಸಮಯ ಕಳೆಯಲಿದ್ದೀರಿ. ವೃತ್ತಿಪರ ಹಾಗೂ ಸಾಮಾಜಿಕ ಚಟುವಟಿಕೆಗಳ ಮಧ್ಯೆ ಗೊಂದಲ ಏರ್ಪಡಲಿದೆ. ಶುಭದಿನ: 05. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.




ಹಿರಿಯ ಅಧಿಕಾರಿಗಳ ಸಹಾಯದಿಂದ ನಿಮ್ಮ ಕೌಶಲವನ್ನು ಹೆಚ್ಚು ಮಾಡಿಕೊಳ್ಳುತ್ತೀರಿ. ವಾರದ ಆರಂಭದಲ್ಲಿ ಮಕ್ಕಳಿಂದ ನಿಮಗೆ ಶುಭ ಸುದ್ದಿ ಇದೆ. ಅವರಿಂದ ನೀವು ಹೆಮ್ಮೆ ಪಡುತ್ತೀರಿ. ವಿವಿಧ ಮೂಲಗಳಿಂದ ಸಂಪತ್ತು ಸಂಗ್ರಹ ಆಗುತ್ತದೆ. ಅದಕ್ಕೆ ತಕ್ಕಂತೆ ನಿಮ್ಮ ಬಜೆಟನ್ನು ಯೋಜನೆ ರೂಪಿಸಿಕೊಳ್ಳಬಹುದು. ವೈಯಕ್ತಿಕ ಸಂಬಂಧವು ಸೌಹಾರ್ದಯುತವಾಗಿ ಇರುತ್ತದೆ. ಶುಭದಿನ: 06. ಗೋಪೂಜೆ ಮಾಡಿ. ಶಿವಕವಚ ಪಠಿಸಿರಿ.




ಈ ವಾರ ವೈಯಕ್ತಿಕ ಹಾಗೂ ವೃತ್ತಿಪರ ಬದುಕಿನಲ್ಲಿ ಲಾಭದ ಯೋಗ ಇದೆ. ಇಂಟರ್‌ವ್ಯೂಗಳಲ್ಲಿ ಭಾಗವಹಿಸುವವರು ಅನುಕೂಲಕರ ಫಲಿತಾಂಶ ನಿರೀಕ್ಷಿಸಬಹುದು. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಬಡ್ತಿಗೆ ಅವಕಾಶವಿದೆ. ಈ ವಾರ ಪ್ರಗತಿ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ. ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಶುಭದಿನ: 07. ದೇವ್ಯಪರಾಧ ಕ್ಷಮಾಪನಾ ಸ್ತೋತ್ರ ಪಠಿಸಿರಿ.